**ದಿನಾಂಕಃ 10.06.2019 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ಮತ್ತು 3ನೇ ಪ್ರತಿವಾದಿ ಪರ ಶ್ರೀ ಎನ್‌ಆರ್‌ಕೆ ವಕೀಲರಿಂದಃ-**

ಈ ದಾವೆ ಹೂಡಲು ಮಾಹಿತಿಯನ್ನು ನಮ್ಮ ವಕೀಲರಿಗೆ ನಾನೇ ನೀಡಿರುತ್ತೇನೆ. ಸರ್ವೆ ನಂ. 254 ರಲ್ಲಿ ಒಟ್ಟು 10 ಎಕರೆ 20 ಸೆಂಟ್ ಇರುತ್ತವೆ. ಆ ಪೈಕಿ ದಿನಾಂಕಃ 21.01.1988 ರಂದು ನನ್ನ ತಾತ 3 ಎಕರೆ 68 ಸೆಂಟ್ ಜಮೀನನ್ನು ಖರೀದಿಸಿರುತ್ತಾರೆ. ಅದರಂತೆ 1ನೇ ಪ್ರತಿವಾದಿಯ ತಂದೆ ಸಹಾ ಸದರಿ ಸರ್ವೆ ನಂಬರಿನಲ್ಲಿ 3 ಎಕರೆ 68 ಸೆಂಟ್ ಜಮೀನನ್ನು ಖರೀದಿಸಿರುತ್ತಾರೆಂದರೆ ಸರಿ. ಅದರಂತೆ ಸದರಿ ಸರ್ವೆ ನಂಬರಿನಲ್ಲಿ ಉಳಿಕೆ ಜಮೀನನ್ನು 2ನೇ ಪ್ರತಿವಾದಿ ಖರೀದಿಸಿರುತ್ತಾರೆಂದರೆ ಸರಿ. ಖರೀದಿಯಾದ 1988 ರಿಂದಲೂ ಯಾರು ಯಾರು ಯಾವ ಜಮೀನಿನ ಸ್ವಾಧೀನದಲ್ಲಿದ್ದರು ಈಗಲೂ ಹಾಗೆಯೇ ಸ್ವಾಧೀನದಲ್ಲಿರುತ್ತಾರೆಂದರೆ ಸರಿ. ನನ್ನ ತಾತ ಖರೀದಿಸಿದ ಜಮೀನಿನ ಸ್ವತ್ತಿನ ದಕ್ಷಿಣಕ್ಕೆ 1ನೇ ಪ್ರತಿವಾದಿ ಸ್ವತ್ತಿರುತ್ತದೆ ಎಂದರೆ ಸರಿ. ಆತನ ಸ್ವತ್ತಿನ ದಕ್ಷಿಣಕ್ಕೆ 2ನೇ ಪ್ರತಿವಾದಿ ಜಮೀನಿರುತ್ತದೆ ಎಂದರೆ ಸರಿ. 1ನೇ ಪ್ರತಿವಾದಿ ತಮ್ಮ ಜಮೀನಿನ ಉತ್ತರ ಅಂಚಿನಲ್ಲಿ ಬೋರ್‌ವೆಲ್ ಹಾಗೂ ಪಂಪ್‌ಹೌಸ್ ಮಾಡಿರುತ್ತಾರೆಂದರೆ ಸರಿ. ನಮ್ಮ ಸ್ವತ್ತಿನ ಪೂರ್ವ ದಿಕ್ಕಿಗೆ ರಸ್ತೆ ಹಾಗೂ ನಮಗೆ ಸೇರಿದ ಸ್ವತ್ತು ಇರುತ್ತದೆ. ದಾವಾ ಸರ್ವೆ ನಂಬರಿನಲ್ಲಿ ನನ್ನ ತಾತನಿಗೆ ಸದರಿ 3 ಎಕರೆ 68 ಸೆಂಟ್ ಜಮೀನು ಹೊರತು ಪಡಿಸಿ ಬೇರೆ ಸ್ವತ್ತು ಇರಲಿಲ್ಲ ಎಂದರೆ ಸರಿ. ನಿಪಿ-5 ಸ್ಕೆಚ್ಚಿನ ಆಧಾರದ ಮೇಲೆ ನಾನು ಈ ದಾವೆ ಹೂಡಿರುತ್ತೇನೆಂದರೆ ಸರಿ. ನಿಪಿ-5 ರಲ್ಲಿ ನಮೂದಿಸಿರುವ ರಸ್ತೆಯ ವಿಸ್ತೀರ್ಣವನ್ನು ನಿಪಿ-5 ರಲ್ಲಿ ನಮೂದಿಸಿರುತ್ತಾರೆಂದರೆ ಸರಿ. ಸದರಿ ರಸ್ತೆಯನ್ನು ನಮ್ಮ ಜಮೀನಿನಲ್ಲಿ ಬಿಟ್ಟುಕೊಂಡಿದ್ದು ಅದು ನಮ್ಮ ಜಮೀನಿನ ಒಳಗಡೆ ಬರುತ್ತದೆ ಎಂದರೆ ಸಾಕ್ಷಿ ಸದರಿ ರಸ್ತೆ ಮೂರು ಜಮೀನಿಗೂ ಸೇರಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-5 ನಕ್ಷೆಯಲ್ಲಿ ರೋಮನ್ ಸಂಖ್ಯೆ 1 ಎಂದು ತೋರಿಸಿರುವುದು ನಮಗೆ ಸೇರಿದ್ದು ಎಂದರೆ ಸರಿ. ಸದರಿ 1ನೇ ಭಾಗದ ಪೂರ್ವ ದಿಕ್ಕಿನ ರಸ್ತೆ ನಂತರದ ಖಾಲಿ ಇರುವ ಎರಡು ಭಾಗ ಅಂದರೆ ರೋಮನ್ ಸಂಖ್ಯೆ 4ರ ಉತ್ತರ ದಿಕ್ಕಿನ ಎರಡು ಭಾಗ ನಮಗೆ ಸೇರಿದ್ದು ಎಂದರೆ ಸರಿ. ಸದರಿ ಸ್ವತ್ತುಗಳ ವಿಸ್ತೀರ್ಣವನ್ನು ನಿಪಿ-5 ರಲ್ಲಿ ನಮೂದಿಸಿಲ್ಲ

ಎಂದರೆ ಸರಿ. ನಿಪಿ-5 ರಲ್ಲಿ ನಮೂದಿಸಿರುವ ಮೊದಲ ಹೆಸರು ಲಿಂಗೇಗೌಡ ಎಂದರೆ ನನ್ನ ತಾತ. ಅದರಂತೆ 5ನೇ ಹೆಸರು ಲಿಂಗೇಗೌಡ ಬೇರೆಯವರಾಗಿರುತ್ತಾರೆ. ಆತ ಕೊತ್ತನೂರು ಗ್ರಾಮದವರು. ಆತ ಈ ದಾವೆಯಲ್ಲಿ ಪಕ್ಷಕಾರರಲ್ಲ ಎಂದರೆ ಸರಿ.

ನಮ್ಮ ಜಮೀನಿನಲ್ಲಿ ಯಾವುದೇ ಒತ್ತುವರಿಯಾಗಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿರುವ 66 ಸೆಂಟ್ ಒತ್ತುವರಿ ಯಾವ ಭಾಗದಲ್ಲಿ ಆಗಿದೆ ಎಂದು ನಾನು ನನ್ನ ದಾವೆಯಲ್ಲಿ ತಿಳಿಸಿರುತ್ತೇನೆ. ಸದರಿ ಒತ್ತುವರಿ 1ನೇ ಪ್ರತಿವಾದಿ ಮಾಡಿರುತ್ತಾನೆ. 1ನೇ ಪ್ರತಿವಾದಿ ಜಮೀನು ಒತ್ತುವರಿಯಾಗಿದ್ದ ಬಗ್ಗೆ ಆತ ಯಾವುದೇ ದಾವಾ ಹೂಡಿರುತ್ತಾನೆಯೇ ನನಗೆ ತಿಳಿದಿಲ್ಲ. ಆ ಸಂಬಂಧ ವಿಚಾರ ಮಾಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಆತ ಯಾವುದೇ ದಾವೆ ಹೂಡಿಲ್ಲ, ಸದರಿ ಸಂಗತಿ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ತಾನು ಖರೀದಿಸಿದ ಸ್ವತ್ತಿನಲ್ಲಿ ಮಾತ್ರ ಸ್ವಾಧೀನದಲ್ಲಿದ್ದು ಯಾವುದೇ ಸ್ವತ್ತಿನ ಹೆಚ್ಚುವರಿ ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-5ರ ತಪ್ಪು ಗ್ರಹಿಕೆ ಮೇಲೆ ಸುಳ್ಳು ದಾವೆ ಹೂಡಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಸ್ವತ್ತಿನಲ್ಲಿ ಯಾವುದೇ ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ನನ್ನ ಸ್ವತ್ತಿನ ಉತ್ತರದ ಅಂಚಿನಲ್ಲಿ ಹಾಕಿರುವ ಪಂಪ್‌ಸೆಟ್ ಹಾಗೂ ಕೊಳವೆ ಬಾವಿಯನ್ನು ಕಬಳಿಸಲು ಸುಳ್ಳು ದಾವೆ ಹೂಡಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)*

ಓ ಹೇ ಕೇ ಸ ಇದೆ,

(ಟಿ. ಶ್ರೀಕಾಂತ್)
ಪ್ರಧಾನ ಸಿವಿಲ್‌ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ಕೊಳ್ಳೇಗಾಲ.